Report of the Rules Committee

Presentation

Mr. SPEAKER.—I beg to present the Report of the Rules Committee. The report will be circulated amongst the hon'ble Members now.

Motion of thanks to the Governor's Address

Dedate Continued

† ಶ್ರೀ ಚುರ್ಚಿಹಾಳಮಠ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು 13ನೇ ತಾರೀಖಿನ ದಿವಸ ಮಾಡಿದ ಭಾಷಣದಲ್ಲಿನ ವಿಷಯಗಳೆಲ್ಲವನ್ನೂ ಸಂಪೂರ್ಣವಾಗಿ ಪರಿಶೀಲಿಸಿದಾಗ ಅವರು ರಾಜ್ಯದ ಎಲ್ಲ ಇಲಾಖೆಗಳ ಎಂದರೆ, ಆಹಾರ, ಪರಿಹಾರ ವ್ಯವಸ್ಥೆ, ತೋಟಗಾರಿಕೆ, ಅರಣ್ಯ, ಸಹಕಾರಿ, ಶಿಕ್ಷಣ, ನೀರಾವರಿ, ವಿದ್ಯುತ್, ಸಮಾಜ ಕಲ್ಯಾಣ ಮೊದಲಾದ ಅನೇಕ ವಿಷಯಗಳನ್ನು ಕೂಲಂಕಷವಾಗಿ ವಿಚಾರಮಾಡಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ ಸತ್ಯಾಂಶವಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಕೂಡ ಸಾಕಷ್ಟು ನಮ್ಮ ಸರ್ಕಾರ ಪ್ರಗತಿಯನ್ನು ಸಾಧಿಸಿದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ನಮ್ಮ ರಾಜ್ಯಕ್ಕೆ ಘೋರವಾದ ಬರಗಾಲ ಬಂದಾಗ ನಮ್ಮ ಸರ್ಕಾರ ಧೀರವಾದ ಹೆಜ್ಜೆಯನ್ನಿಟ್ಟು, ಎಲ್ಲ ಕಡೆಯೂ ಪರಿಹಾರ ಕಾರ್ಯಗಳನ್ನು ನರವೇರಿಸಿ ಬಹಳ ರೀತಿಯಿಂದ ಜನತೆಗೆ ಅನುಕೂಲ ಮಾಡಿಕೊಟ್ಟಿದ್ದನ್ನು ಯಾರೂ ಮರೆಯುವಂತೆ ಇಲ್ಲ.

ತಾಲ್ಲೂಕು ಬೋರ್ಡ್ ಚುನಾವಣೆಗಳ ಬಗ್ಗೆ ರಾಜ್ಯಪಾಲರು ಯಾವುದೇ ಒಂದು ವಿಷಯವನ್ನು ಎತ್ತಿ ವರ್ಣನಾತ್ಮಕ ದೃಷ್ಟಿಯಿಂದ ಹೇಳಿಲ್ಲ. ಆದರೂ ಸಹ ತಾಲ್ಲೂಕು ಬೋರ್ಡ್ ಚುನಾವಣೆಗಳ ಬಗ್ಗೆ ಅನೇಕ ಸದಸ್ಯರು ಟೀಕೆ ಮಾಡಿದ್ದನ್ನು ನೋಡಿದರೆ, ಅದರಲ್ಲಿ ಏನಾದರೂ ಇದೆಯೇ ಎಂದು ಪರಿಶೀಲನೆದೆ, ಅವರಲ್ಲಿದ್ದ ಅನಮಾಧಾನ ಮಾತ್ರ ಎದ್ದು ಕಾಣುತ್ತದೆ, ಮತ್ತೊಂದೇನೂ ಇಲ್ಲ. ಏಕೆಂದರೆ ರಾಜ್ಯಪಾಲರು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಗಳು ಶಾಂತ ರೀತಿಯಿಂದ ನಡೆದುವು ಎಂದು ಹೇಳಿದ್ದಾರೆ. ಕಾಂಗ್ರೆಸ್ಸಿಗರು ಬಹು ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ ಎನ್ನುವ ಹೆಮ್ಮೆಯಿಂದ ಅವರು ಮಾತನಾಡುತ್ತಿದ್ದಾರೆ, ಆ ಹೆಮ್ಮೆ ಸರಿಯಿಲ್ಲ ಎನ್ನುವಂಥ ಮಾತನ್ನು ಅನೇಕ ಸದಸ್ಯರು ಹೇಳುತ್ತ, ಅದಕ್ಕೆ ಭಾರತದ ಒಂದು ಉದಾಹರಣೆಯನ್ನು ಹೇಳಿದರು. ಅವರಿಗಿಂತ ಕಥೆಯನ್ನು ಮೀರಿಸಿ ಹೇಳಬಹುದು. ಆದರೆ ನನಗೆ ಹೆಚ್ಚು ಸಮಯವಿಲ್ಲ. ಅವರು ಇಲ್ಲಿ ಅನಮಾದಾನ ಪಡಲಕ್ಕೆ ಕಾರಣ ಇಷ್ಟೆ. ತಾಲ್ಲೂಕು ಬೋರ್ಡ್ ಚುನಾವಣೆಗಳು ಬಂದಾಗ ಅವರು ನಾನಾ ಅಶೋತ್ತರಗಳನ್ನು ಇಟ್ಟುಕೊಂಡು, ಎಲ್ಲ ಕಡೆಗೂ ಬಹುವಾಗಿ ಕಾಂಗ್ರೆಸ್ಸ್ ಪಕ್ಷ ಬರುವುದಿಲ್ಲ, ನಮ್ಮ ಪಕ್ಷವೇ ಬರುತ್ತದೆ, ಅನೇಕರು ಪ್ರೆಸಿಡೆಂಟರಾಗುತ್ತೇವೆ, ವೈಸ್ ಪ್ರೆಸಿಡೆಂಟರಾಗುತ್ತೇವೆ, ಹಳ್ಳಿಗಳಲ್ಲಿ ಹೋದಾಗ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಒಳ್ಳೊಳ್ಳೆಯ ದೊಡ್ಡಸ್ಥನವನ್ನು ಹೇಳಿಕೊಂಡು ಬಂದಿದ್ದರು. ಚುನಾವಣೆಗಳಲ್ಲಿ ಅವರು ಬಾರದೆ ಈ ರೀತಿಯಾದುದಕ್ಕೆ ತಮ್ಮ ಅನಮಾಧಾನವನ್ನು ತೋರಿಸಲು ಹೀಗೆ ಟೀಕೆ ಮಾಡಿದ್ದಾರೆಯೇ ವಿನಾ ಇದರ ಬಗ್ಗೆ ಯಾವ ಅರ್ಥವೂ ಇಲ್ಲ ಎನ್ನುವಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇದೆ.

ಅನೇಕ ಯೋಜನೆಗಳಲ್ಲಿ ಕಾರ್ಯದ ಪ್ರಗತಿ ಸಾಕಷ್ಟು ಸಾಧಿಸಿದ್ದರೂ ಇನ್ನೂ ಹೆಚ್ಚು ಹೆಚ್ಚು ಪ್ರಗತಿ ಆಗಬೇಕಾಗಿದೆ. ಇನ್ನೂ ಪ್ರಗತಿ ಆಗುವುದಕ್ಕೆ ಅನೇಕ ಸಲಹೆ ಸೂಚನೆಗಳನ್ನು ಕೊಡುವುದು ಅವಶ್ಯ.

ವ್ಯವಸಾಯ ವಿಭಾಗದಲ್ಲಿ ಪ್ರತಿ ವರ್ಷ ಕ್ರ್ಯಾಷ್ ಪ್ರೋಗ್ರಾಂ ಎಂಬ ಯೋಜನೆ ಮಾಡಿ ಅದಕ್ಕೆ ಸರಕಾರ ಕೆಲವು ಹಣ ಕೊಡುತ್ತಿದೆ. ಆದರೆ ಇಂದು ಬಹುತೇಕವಾಗಿ ನಮ್ಮ ಕಡೆ ಈ ಹಣ ಖರ್ಚಾಗದೆ ಹಾಗೆಯೇ ಉಳಿದಿರುವುದು ಕಂಡುಬರುತ್ತದೆ. ಈ ಹಣವನ್ನು ಸಾಲದ ರೂಪವಾಗಿ